**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 749/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - ರಾಜು | | **ಚಾ.ಸಾ.-7** |
| **ತಂದೆಯ ಹೆಸರು** | - ಮಲ್ಲಶೆಟ್ಟಿ | | **ಪ್ರಾ.ಸಾ.-7** |
| **ವಯಸ್ಸು** | - 63 ವರ್ಷ | | |
| **ಉದ್ಯೋಗ** | - ನಿವೃತ್ತ ನೌಕರ | | |
| **ವಾಸ ಸ್ಥಳ** | - ಬೆಂಗಳೂರು | | |

ದಿನಾಂಕಃ 26.10.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ಚಾ.ಸಾ. 1 ರವರ ಪರಿಚಯವಿದೆ. ಚಾ.ಸಾ. 2 ರಿಂದ 6 ರವರ ಪರಿಚಯವಿರುತ್ತದೆ. ಆರೋಪಿ 1 ರವರ ಪರಿಚಯವಿರುತ್ತದೆ, ಅವರು ನನ್ನ ತಂಗಿಯ ಮಗ, ಆರೋಪಿ 2 ನನ್ನ ತಂಗಿಯ ಗಂಡ, ಆರೋಪಿ 3 ನನ್ನ ತಂಗಿ, ಆರೋಪಿ 4 ಆರೋಪಿ 2 ಮತ್ತು 3 ರವರ ಮಗಳು, ಆರೋಪಿ 5 ರವರು ಆರೋಪಿ 2 ಮತ್ತು 3 ರವರ ಅಳಿಯ. ದಿನಾಂಕಃ 02.06.2013 ರಂದು ಆರೋಪಿ 1 ಮತ್ತು ಚಾ.ಸಾ. 1 ರವರ ಮದುವೆ ಶ್ರೀರಂಗಪಟ್ಟಣದ ಆಯುಪ್ಪಸ್ವಾಮಿ ಕಲ್ಯಾಣಮಂಟಪದಲ್ಲಿ ಆಗಿರುತ್ತದೆ. ಆರೋಪಿ 1 ರವರಿಗೆ 60-100 ಗ್ರಾಂ ಚಿನ್ನಾಭರಗಳನ್ನು ನೀಡಿ ಚಾ.ಸಾ. 1 ರವರ ತಂದೆ ತಾಯಿಯವರೇ ಮದುವೆ ಮಾಡಿಕೊಟ್ಟಿರುತ್ತಾರೆ. ಮದುವೆಯ ಮಾತುಕತೆ ನಾನು ಸೇರಿರುತ್ತೇನೆ. ಮದುವೆಯ ಮಾತುಕತೆ ಸಂದರ್ಭದಲ್ಲಿ ಚಾ.ಸಾ. 6, ಚಾ.ಸಾ. 5 ಹಾಗೂ ಊರಿನ ಪ್ರಮುಖರು ಹಾಜರಿದ್ದರು. ಮದುವೆಯ ಮಾತುಕತೆಯಲ್ಲಿ ಮದುವೆಯ ಖರ್ಚು ವೆಚ್ಚ ಹಾಗೂ ಚಿನ್ನಾಭರಣವನ್ನು ನೀಡಿ ಮದುವೆ ಮಾಡಿಕೊಡುವುದಾಗಿ ಮಾತುಕತೆಯಾಗಿರುತ್ತದೆ. ಮದುವೆಯಾದ ನಂತರ ಚಾ.ಸಾ. 1 ಮತ್ತು ಆರೋಪಿ 1 ರವರು ಮದ್ದೂರಿನ ಶಿವಪುರದಲ್ಲಿ ವಾಸವಾಗಿದ್ದರು. ಮದುವೆಯಾದ ನಂತರ ಸ್ವಲ್ಪ ದಿನ ಚಾ.ಸಾ. 1 ಮತ್ತು ಆರೋಪಿ 1 ರವರು ಅನ್ಯೋನ್ಯವಾಗಿದ್ದರು, ನಂತರ ಸಣ್ಣ ಪುಟ್ಟ ವಿಚಾರಣಕ್ಕೆ ಗಲಾಟೆಯಾಗುತ್ತಿತ್ತು.

ಆರೋಪಿತರು ಹೆಚ್ಚಿನ ವರದಕ್ಷಿಣೆಗಾಗಿ ಕಿರುಕುಳ ನೀಡುತ್ತಿದ್ದಾರೆಂದು, ಚಾ.ಸಾ. 1 ರವರ ತಾಯಿ ನನಗೆ ತಿಳಿಸಿರುತ್ತಾರೆ, ನಂತರ ಚಾ.ಸಾ. 1 ರವರು ಆಗಾಗ್ಗೆ ತವರು ಮನೆಗೆ

ಹೋಗುತ್ತಾರೆಂದು ಚಾ.ಸಾ. 1 ರವರ ತಂದೆ ತಾಯಿ ನನಗೆ ತಿಳಿಸಿರುತ್ತಾರೆ. ನಾನು ಚಾ.ಸಾ. 1 ರವರ ತಂದೆ ತಾಯಿಯನ್ನು ಕೇಳಿದಾಗ ಆರೋಪಿ ಕಿರುಕುಳ ನೀಡುತ್ತಿರುವ ಬಗ್ಗೆ ನನಗೆ ತಿಳಿಸಿರುತ್ತಾರೆ. ನಾವು ಆರೋಪಿ 1 ಮತ್ತು ಚಾ,ಸಾ. 1 ರವರಿಗೆ ಅನ್ಯೋನ್ಯವಾಗಿ ಸಂಸಾರ ಮಾಡಿಕೊಂಡು ಹೋಗುವಂತೆ ಬುದ್ದಿವಾದ ಹೇಳಿರುತ್ತೇನೆ. ದಿನಾಂಕಃ 22.11.2019 ರಂದು, ಆರೋಪಿ 1 ಮತ್ತು ಚಾ.ಸಾ. 1 ರವರಿಗೆ ಗಲಾಟೆಯಾಗಿತ್ತು, ಆಗ ಆರೋಪಿತರು ಮತ್ತು ಚಾ.ಸಾ. 1 ರವರ ತಂದೆ ನನ್ನನ್ನು ಕರೆದಿರುತ್ತಾರೆ. ನಂತರ ನಾನು, ಚಾ.ಸಾ. 1 ಮತ್ತು ಆರೋಪಿ 1 ರವರಿಗೆ ಹೊಂದಿಕೊಂಡು ಹೋಗುವಂತೆ ತಿಳಿಸಿರುತ್ತೇನೆ. ಆ ಸಮಯದಲ್ಲಿ ನನ್ನ ಮಾತಿಗೆ ಬೆಲೆ ಕೊಡಲಿಲ್ಲ. ನಂತರ ನೀವು ಏನಾದರೂ ಮಾಡಿಕೊಳ್ಳಿ ಎಂದು ಹೇಳಿ ಸುಮ್ಮನೆ ಆಗಿರುತ್ತೇನೆ. ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿ 2 ಮತ್ತು 3 ರವರನ್ನು ನೋಡಿ ಗುರುತಿಸಿರುತ್ತಾರೆ, ಈ ದಿನ ಆರೋಪಿ 4 ಮತ್ತು 5 ರವರ ಗೈರು ಹಾಜರಿಯನ್ನು ಕೋರಿ ವಿನಾಯಿತಿ ಅರ್ಜಿಯನ್ನು ಸಲ್ಲಿಸಿದ್ದು, ಅವರನ್ನು ನೋಡಿ ಗುರುತಿಸಲು ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ರವರಿಂದಃ**

ಮದುವೆಯ ಪೂರ್ವದಲ್ಲಿ ಮದುವೆ ಮಾತುಕತೆಗೆ ಚಾ.ಸಾ. 3 ರವರ ಮನೆಯಲ್ಲಿ ನೀವು ಚಾ.ಸಾ. 3 ರಿಂದ 6 ರವರು ಮತ್ತು 8 ರಿಂದ 10 ರವರು ಹಾಗೂ ಆರೋಪಿ 2 ಮತ್ತು 3 ಎಲ್ಲರೂ ಸೇರಿರುತ್ತೀರಿ ಎಂದರೆ ಸರಿ. ಮದುವೆಯ ಮಾತುಕತೆಯಲ್ಲಿ 100 ಗ್ರಾಂ ಚಿನ್ನದ ಒಡವೆಗಳನ್ನು ಹಾಗೂ 50 ಸಾವಿರ ನಗದು ಹಣವನ್ನು ವರದಕ್ಷಿಣೆಯಾಗಿ ನೀಡಿ, ಕಲ್ಯಾಣ ಮಂಟಪದಲ್ಲಿ ಮದುವೆ ಮಾಡಿಕೊಡುವಂತೆ ಮಾತುಕತೆಯಾಗಿರುತ್ತದೆಯೆಂದರೆ ಸರಿ. ಆರೋಪಿತರು ಮದುವೆಯಾದ ನಂತರ ಚಾ.ಸಾ. 1 ರವರನ್ನು ಸುಮಾರು 3 ತಿಂಗಳುಗಳ ಕಾಲ ಚೆನ್ನಾಗಿ ನೋಡಿಕೊಂಡು, ನಂತರ 50 ಸಾವಿರ ಹಣ ತೆಗೆದುಕೊಂಡು ಬಾ ಎಂದು, ಅರೋಪಿತರು ಚಾ.ಸಾ. 1 ರವರಿಗೆ ಕಿರುಕುಳ ನೀಡಿ ಗಲಾಟೆ ಮಾಡಿ, ಅವ್ಯಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ಮಾಡುತ್ತಿದ್ದಾರೆಂದು ಚಾ.ಸಾ. 3 ರವರು ನಿಮಗೆ ತಿಳಿಸಿ, ಸಾಲ ಮಾಡಿ, 50 ಸಾವಿರ ಹಣವನ್ನು ಆರೋಪಿ 2 ಮತ್ತು 3 ರವರಿಗೆ ನೀಡಿರುವುದಾಗಿ ನಿಮಗೆ

ತಿಳಿಸಿರುತ್ತಾರೆಂದರೆ ಸರಿ. ನಂತರ ಆರೋಪಿತರು ಚಾ.ಸಾ. 1 ರವರನ್ನು ಸ್ವಲ್ಪ ದಿನಗಳ ಕಾಲ ಚೆನ್ನಾಗಿ ನೋಡಿಕೊಂಡಿರುತ್ತಾರೆಂದರೆ ಸರಿ. ಇದಾದ 4-5 ತಿಂಗಳ ನಂತರ, ಆರೋಪಿತರು ಚಾ.ಸಾ. 1 ರವರಿಗೆ ಹೆಚ್ಚಿಗೆ ವರದಕ್ಷಿಣೆ ಹಣಕ್ಕಾಗಿ ಕಿರುಕುಳ ನೀಡುತ್ತಿದ್ದರು ಎಂದರೆ ಸರಿ. ಆಗ, ಚಾ.ಸಾ, 3 ರಿಂದ 11 ರವರು 4-5 ಬಾರಿ ನ್ಯಾಯಪಂಚಾಯತಿ ಮಾಡಿ ಸಮಾಧಾನಪಡಿಸಿರುತ್ತೀರಿ ಎಂದರೆ ಸರಿ. ನಂತರ ದಿನಾಂಕಃ 05.11.2019 ರಂದು, ರಾತ್ರಿ ಸುಮಾರು 11 ಗಂಟೆ ಯ ಸಮಯದಲ್ಲಿಆರೋಪತರು ಹೆಚ್ಚಿನ ವರದಕ್ಷಿಣೆ ಹಣಕ್ಕಾಗಿ ಚಾ.ಸಾ. 1 ರವರ ಕತ್ತಿನಲ್ಲಿದ್ದ ಚಿನ್ನದ ಮಾಂಗಲ್ಯದ ಸರವನ್ನು ಬಿಚ್ಚಿಸಿಕೊಂಡು ಚಾ.ಸಾ. 1 ರವರಿಗೆ ಮನ ಬಂದಂತೆ ಥಳಿಸಿ ಮನೆಯಿಂದ ಹೊರಗಡೆ ಹಾಕಿದಾಗ ಚಾ.ಸಾ. 2 ರವರು ಆರೋಪಿತರನ್ನು ಸಮಾಧಾನಪಡಿಸಿ, ಚಾ.ಸಾ. 1 ರವರಿಗೆ ಆರೋಪಿ ಬಳಿ ಇದ್ದ, ಚಿನ್ನದ ಮಾಂಗಲ್ಯದ ಸರವನ್ನು ವಾಪಸ್ಸು ಕೊಡಿಸಿ, ಮನೆಗೆ ಕುಳಹಿಸಿಕೊಟ್ಟಿರುತ್ತಾರೆಂದರೆ ಸರಿ. ನಂತರ ದಿನಾಂಕಃ 22.11.2019 ರಂದು, ಆರೋಪಿತರು ಮತ್ತೊಮ್ಮೆ ತೊಂದರೆ ಕೊಟ್ಟಾಗ ನೀವು ಬುದ್ದಿವಾದ ಹೇಳಿರುತ್ತೀರಿ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರುಃ ಶ್ರೀ ಹೆಚ್ ಎಂ ರವರಿಂದ</u>**

ನಾನು ಎಸ್ಕಾರ್ಟ್ ಆಟೋಮೊಬೈಲ್ ಲಿಮಿಟೆಡ್ ನಲ್ಲಿ ಕೆಲಸದಲ್ಲಿದ್ದೆ. ನಾನು ಮದುವೆಯ ಮಾತುಕತೆಗೆ ಹೋಗಿದ್ದ ದಿನಾಂಕ, ತಿಂಗಳು ನನಗೆ ನೆನಪಿಲ್ಲ. ಆದರೆ ಮದುವೆಯ ಮಾತುಕತೆಗೆ ನಾನು ಹೋಗಿರುತ್ತೇನೆ. ನಾನು ಹುಡುಗಿಯವರಿಗೆ 60-100 ಗ್ರಾಂ ಚಿನ್ನವನ್ನು ನೀಡುವಂತೆ ಮಾತುಕತೆಯಲ್ಲಿ ತಿಳಿಸಿರುತ್ತೇನೆ. ನನ್ನ ಸಮಕ್ಷಮದಲ್ಲಿ ಯಾವುದೇ ಚಿನ್ನ ನೀಡಿರುವುದಿಲ್ಲ. ಮದುವೆಯಾದ ನಂತರ ಸ್ವಲ್ಪ ದಿನ ಹುಡುಗ ಮತ್ತು ಹುಡುಗಿ ಚೆನ್ನಾಗಿದ್ದರು ಎಂದರೆ ಸರಿ. ಆರೋಪಿ 4 ಮತ್ತು 5 ರವರು ಬೆಂಗಳೂರಿನಲ್ಲಿ ವಾಸವಾಗಿದ್ದಾರೆಂದರೆ ಸರಿ.

ಚಾ.ಸಾ. 1 ಮತ್ತು ಆರೋಪಿ 1 ರವರ ನಡುವೆ ಭಿನ್ನಾಭಿಪ್ರಾಯ ಬಂದಾಗ ಆರೋಪಿ 2 ಮತ್ತು 3 ರವರು ಮನೆಯನ್ನು ಬಿಟ್ಟು ಮಂಡ್ಯದಲ್ಲಿ ವಾಸವಾಗಿರುತ್ತಾರೆಂದರೆ ಸರಿ. ಆರೋಪಿ 1 ರವರು ಚಾ.ಸಾ. 1 ರವರಿಗೆ ಕಿರುಕುಳ ನೀಡುತ್ತಿದ್ದಾರೆಂದು ಚಾ.ಸಾ. 1 ರವರ ತಂದೆ ತಾಯಿ ನಿಮಗೆ ಹೇಳಿರುವುದನ್ನು ಹೊರತುಪಡಿಸಿ, ನಿಮಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸರಿ. ನಾನು ಕೇಳಿದಾಗ, ಆರೋಪಿ 1 ರವರು ಚಾ.ಸಾ. 1 ರವರ ಮೇಲೆ ದೂರನ್ನು ಹೇಳುತ್ತಿದ್ದರು, ಚಾ.ಸಾ. 1 ರವರನ್ನು ಕೇಳಿದಾಗ ಅವರು ಆರೋಪಿ 1 ರವರ ವಿರುದ್ದ ದೂರನ್ನು ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ಮದುವೆಯಾದ ನಂತರ

ನಿಮ್ಮ ಕುಟುಂಬಕ್ಕೂ ಮತ್ತು ಆರೋಪಿಯವರ ಕುಟುಂಬಕ್ಕೆ ಸಾಮರಸ್ಯ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ 2 ಮತ್ತು 3 ರವರು ಆರೋಪಿ 1 ಮತ್ತು ಚಾ.ಸಾ. 1 ರವರ ವಿಚಾರದಲ್ಲಿ ತಲೆ ಹಾಕುತ್ತಿರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿತರ ಮತ್ತು ಚಾ,ಸಾ. 1 ರವರ ಕುಟುಂಬದ ವಿಚಾರಗಳು ನಿಮಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸರಿ. ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿದ ದಿನ ಕೆಲಸಕ್ಕೆ ರಜೆ ಇರಲಿಲ್ಲ, ಆದರೆ ನಾನು ಮದ್ದೂರಿಗೆ ಬಂದಿದ್ದೆ. ನಾನು ಮಧ್ಯಾಹ್ನ 01 ಗಂಟೆಗೆ ಪೋಲೀಸ್ ಠಾಣೆಗೆ ಬಂದಿರುತ್ತೇನೆ.

ಸದರೀ ದಿನ ನಾನು, ನನ್ನ ಕೆಲಸಕ್ಕೆ ರಜೆ ಹಾಕಿರಲಿಲ್ಲ. ಪೋಲೀಸರಿಗೆ ನಾನು ನೀಡಿರುವ ಹೇಳಿಕೆಯಲ್ಲಿ ನಾನು ಸಹಿಯನ್ನು ಮಾಡಿರುತ್ತೇನೆ. ಪೋಲೀಸರು ಬರೆದುಕೊಂಡಿರುವ ಹೇಳಿಕೆಗೆ ನಾನು ಸಹಿಯನ್ನು ಮಾಡಿರುತ್ತೇನೆ. ಆರೋಪಿ 1 ಮತ್ತು ಚಾ.ಸಾ. 1 ರವರ ನಡುವೆ ಯಾವುದೇ ಗಲಾಟೆಯಾಗಿರಲಿಲ್ಲ ಎಂದರೆ ಸರಿಯಲ್ಲ. ನೀವು ನಿಮ್ಮ ತಂಗಿಯ ಮೇಲಿನ ವೈಮನಸ್ಸಿನಿಂದಾಗಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು
ಸಾಕ್ಷಿ ಸಹಿ ಮತ್ತು ಜೆ ಎಂ ಎಫ್ ಸಿ, ಮದ್ದೂರು.